AUGUST 31, 2026

AKASHAVANI - DHARWAD

PRADESH SAMACHARA (KANNADA) 07.05 A.M.

<><><>

ಪ್ರಸಾರ ಭಾರತಿ, ಆಕಾಶವಾಣಿ

ಧಾರವಾಡ

ಪ್ರದೇಶ ಸಮಾಚಾರ

<><><>

ಮುಖ್ಯಾಂಶಗಳು

<><><>

- ಮನ್ ಕಿ ಬಾತ್; 'ವಿಕಸಿತ ಭಾರತಕ್ಕಾಗಿ, ವ್ಯಸನಮುಕ್ತ ಯುವಜನತೆ'; ಪ್ರಧಾನಮಂತ್ರಿ ಪ್ರತಿಪಾದನೆ.
- ಅರಣ್ಯ ಇಲಾಖೆಯಿಂದ, ಚಾರಣ ಮತ್ತು ಇಕೋ–ಟ್ರೇಲ್, ಮಾದರಿ ಕಾರ್ಯಾಚರಣೆ ವಿಧಾನ ಜಾರಿಗೆ.
- ಎಂ.ಎಂ.ಕಲಬುರ್ಗಿ ಅವರ ಜ್ಞಾನದ ಕಾಯಕ, ಪೀಳಿಗೆಗಳಿಗೆ ದಾರಿದೀಪ – ಕೊಡಗು ವಿಶ್ವವಿದ್ಯಾಲಯದ ಉಪ ಕುಲಪತಿ, ಅಭಿಮತ.
- 'ಮಕ್ಕಳ ಕಣ್ಣಿನ ಆರೋಗ್ಯ ಮತ್ತು ಸುರಕ್ಷತಾ ಮಾಸ'; ಪೋಷಕರ ಜಾಗೃತಿ ಅಭಿಯಾನ, ಇಂದಿಗೆ ಮುಕ್ತಾಯ.

<><><>

'ವಿಕಸಿತ ಭಾರತಕ್ಕಾಗಿ, ಮಾದಕದ್ರವ್ಯ ಮುಕ್ತ ಯುವಸಮೂಹ' ಅಭಿಯಾನ, ದೇಶಾದ್ಯಂತ ಜನಾಂದೋಲನವಾಗಿ ಮುಂದುವರಿದಿದೆ ಎಂದು, ಪ್ರಧಾನಮಂತ್ರಿ ನರೇಂದ್ರ ಮೋದಿ ತಿಳಿಸಿದ್ದಾರೆ. ಆಕಾಶವಾಣಿ ಮೂಲಕ, ರಾಷ್ಟ್ರವ್ಯಾಪಿ ಪ್ರಸಾರವಾದ, ಮನ್ ಕಿ ಬಾತ್ ನ, 137ನೇ ಆವೃತ್ತಿಯಲ್ಲಿ, ದೇಶ–ವಿದೇಶಗಳ ಭಾರತೀಯರನ್ನುದ್ದೇಶಿಸಿ, ಅವರು, ತಮ್ಮ ಮನದ ಮಾತು ಹಂಚಿಕೊಂಡರು.

<><><>

ಈ ಕುರಿತು, ಒಂದು ವರದಿ..

<><><>

*ನಮ್ಮ ದೇಶದ ಯುವಜನತೆ, ಮಾದಕವಸ್ತುಗಳಿಂದ ದೂರವಿರಬೇಕು, ಡ್ರಗ್ ಫ್ರೀ ಇಂಡಿಯಾ ಆಗಬೇಕು ಎಂಬ ಸಂಕಲ್ಪದೊಂದಿಗೆ, ಭಾರತದ ಯುವಜನತೆಯ ಆರೋಗ್ಯ, ಸಂತೋ ´ ಮತ್ತು ಒಳ್ಳೆ ಭವಿ ್ಯಕ್ಕಾಗಿ ದೃಢಸಂಕಲ್ಪ ಮಾಡೋಣ ಎಂದು, ಪ್ರಧಾನಮಂತ್ರಿಯವರು ಸದಾಶಯ ವ್ಯಕ್ತ ಪಡಿಸಿದ್ದಾರೆ.*

*ನಮ್ಮ ಯುವ ಸಂಗೀತಗಾರರು, ಮಾದಕವಸ್ತುಗಳಿಲ್ಲದ ಜೀವನ ಎ ಷ್ಟು ಚೆಂದ ಅನ್ನೋ ಸಂದೇಶ ಕೊಡುವ ಹಾಡುಗಳನ್ನು ಕಟ್ಟಿಕೊಡುವಂತೆ, ವಿದ್ಯಾರ್ಥಿಗಳು ಮತ್ತು ನಾಟಕಕಾರರು, ಮಾದಕವಸ್ತುಗಳ ಅಪಾಯ ಹಾಗೂ ಪರಿಹಾರೋಪಾಯಗಳ ಬಗ್ಗೆ, ಹೃದಯ ತಟ್ಟುವ ಸಣ್ಣ ನಾಟಕಗಳನ್ನು ಬರೆಯುವಂತೆ, ಪ್ರಧಾನಮಂತ್ರಿ ಕೋರಿದರು. ಈ ಪ್ರಯತ್ನಗಳನ್ನು, ಹ್ಯಾಶ್‌ಟ್ಯಾಗ್ ಬಳಸಿ, ಸಾಮಾಜಿಕ ಮಾಧ್ಯಮಗಳಲ್ಲೂ ಹಂಚಿಕೊಳ್ಳುವಂತೆ, ಪ್ರೇರೇಪಿಸಿದರು.*

<><><>

ಶ್ರೀಧರ (38) + ಪ್ರಧಾನಮಂತ್ರಿ ನರೇಂದ್ರ ಮೋದಿ ಧ್ವನಿ (55) ಸೆಕೆಂದುಗಳು

<><><>

'ವಿಕಸಿತ ಭಾರತಕ್ಕಾಗಿ, ಮಾದಕದ್ರವ್ಯ ಮುಕ್ತ ಯುವಸಮೂಹ' ಅಭಿಯಾನದ ಭಾಗವಾಗಿ, 'ನಶೆ ಮುಕ್ತ ಕರ್ನಾಟಕ ಹಾಗೂ ಭಾರತ' ಪ್ರಕಲ್ಪದಡಿ, 'ಆಪರೇಷನ್ ರೈಸ್' ಹಾಗೂ 'ಬೇಡ ಬ್ರೋ' ಆಂದೋಲನ, ಜನಸಹಭಾಗಿತ್ವದಲ್ಲಿ, ರಾಜ್ಯಾದ್ಯಂತ, ಪರಿಣಾಮಕಾರಿಯಾಗಿ ಮುಂದುವರಿದಿದೆ.

<><><>

ಧಾರವಾಡ ತಾಲೂಕು ಗಡಿಯ, ಕೊನೆಯ ಗ್ರಾಮ ಜೀರಿಗಿವಾಡ. ಕೇಂದ್ರ ಶಿಕ್ಷಣ ಖಾತೆ ಸಚಿವರು ಹಾಗೂ ಧಾರವಾಡ ಲೋಕಸಭಾ ಕ್ಷೇತ್ರದ ಸಂಸದ, ಪ್ರಲ್ಹಾದ ಜೋಶಿ ಅವರ ಇಚ್ಛೆಯಂತೆ, ಸಂಸದರ ಆದರ್ಶ ಗ್ರಾಮವಾಗಿಯೂ ಈ ಹಿಂದೆ ಆಯ್ಕೆಯಾದ ಗ್ರಾಮ. ಸಾವಿರದ ಐನೂರು ಗ್ರಾಮಸ್ಥರ ಇಚ್ಛಾಶಕ್ತಿಯಿಂದಾಗಿ, ಸಂಪೂರ್ಣ ಮದ್ಯ, ಮಾದಕವಸ್ತು ಹಾಗೂ ತಂಬಾಕು ಸೇವನೆ ಮುಕ್ತ ಗ್ರಾಮವಾಗಿ ರೂಪುಗೊಂಡು, ಮೂರು ವರ್ಷಗಳು ಪೂರ್ಣಗೊಂಡಿವೆ.

<><><>

ಪ್ರದೇಶ ಸಮಾಚಾರಕ್ಕಾಗಿ, ಮಾಹಿತಿ ನೀಡಿದ್ದಾರೆ, ಜೀರಿಗಿವಾಡ ಗ್ರಾಮದ, ಹಿರಿಯ ಕನ್ನಡ ಪ್ರಾಥಮಿಕ ಸರ್ಕಾರಿ ಶಾಲೆಯ, ಪ್ರಧಾನ ಗುರುಮಾತೆ, ಚಂಪಾ ನರೇಗಲ್ಲ.

<><><>

ಮುಖ್ಯೋಪಾಧ್ಯಾಯಿನಿ, ಚಂಪಾ ನರೇಗಲ್ಲ ಧ್ವನಿ (40) ಸೆಕೆಂದುಗಳು

<><><>

ಚಾರಣಿಗರ ಸುರಕ್ಷತೆ ಹಾಗೂ ಪರಿಸರ ಸೂಕ್ಷ್ಮತೆಯನ್ನು ರಕ್ಷಿಸಲು, ರಾಜ್ಯ ಅರಣ್ಯ ಇಲಾಖೆ, ಚಾರಣ ಮತ್ತು ಇಕೋ–ಟ್ರೇಲ್, ಮಾದರಿ ಕಾರ್ಯಾಚರಣೆ ವಿಧಾನ ಜಾರಿಗೊಳಿಸಿದೆ. ಪಶ್ಚಿಮಘಟ್ಟಗಳ ಮತ್ತು ಅರಣ್ಯ ಪ್ರದೇಶಗಳ, ರಾಜ್ಯದ 39 ಸಂಭಾವ್ಯ ಚಾರಣ ಮಾರ್ಗಗಳಿಗೆ, ಈ ನಿಯಮ ಅನ್ವಯವಾಗಲಿದೆ. ಪ್ರವೇಶ ಸಾಮರ್ಥ್ಯದ ನಿಯಂತ್ರಣ, ತರಬೇತಿ ಪಡೆದ ಪ್ರಕೃತಿ ಮಾರ್ಗದರ್ಶಿಗಳು, ತಂತ್ರಜ್ಞಾನ ಆಧಾರಿತ ಸುರಕ್ಷತಾ ಮೇಲ್ವಿಚಾರಣೆ,ಉತ್ತಮ ಚಾರಣ ಮೂಲಸೌಕರ್ಯ, ವನ್ಯಜೀವಿ ಸಂರಕ್ಷಣಾ ನಿಯಮಗಳು, ತ್ವರಿತ ತುರ್ತು ಸ್ಪಂದನೆ ಹಾಗೂ ಎಲ್ಲ ನಿಯಮಗಳ ಕಟ್ಟುನಿಟ್ಟಿನ ಪಾಲನೆ ಖಾತ್ರಿ ಪಡಿಸಲು, ಅರಣ್ಯ ಇಲಾಖೆ ಕ್ರಮ ಕೈಗೊಂಡಿದೆ.

<><><>

ಈಗ ಪ್ರಕಟಣೆ, ನಂತರ ಪ್ರದೇಶ ಸಮಾಚಾರ ಮುಂದುವರೆಯುವುದು..

(37 ಸೆಕೆಂದುಗಳು)

<><><>

ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ..

<><><>

ಕನ್ನಡ ಸಂಶೋಧನಾ ಕ್ಷೇತ್ರಕ್ಕೆ, ವಿಶಿ ್ಟ ಮಾರ್ಗದರ್ಶನ ನೀಡಿದ, ಡಾಕ್ಟರ್ ಎಂ.ಎಂ. ಕಲಬುರ್ಗಿ ಅವರ ಸಂಶೋಧನಾ ದೃಷ್ಟಿ, ಕನ್ನಡಪರ ಚಿಂತನೆ ಹಾಗೂ ಜ್ಞಾನದ ಕಾಯಕ, ಮುಂದಿನ ಪೀಳಿಗೆಗಳಿಗೆ ಸದಾ ದಾರಿದೀಪ ಎಂದು, ಕೊಡಗು ವಿಶ್ವವಿದ್ಯಾಲಯದ ಉಪ ಕುಲಪತಿ ಪ್ರೊಫೆಸರ್ ಅಶೋಕ ಆಲೂರ, ಹೇಳಿದ್ದಾರೆ. ಧಾರವಾಡದ, ಆಲೂರು ವೆಂಕಟರಾವ ಸಾಂಸ್ಕೃತಿಕ ಭವನದಲ್ಲಿ, ಡಾಕ್ಟರ್ ಎಂ.ಎಂ. ಕಲಬುರ್ಗಿ ಅವರ, 11ನೇ ಹುತಾತ್ಮ ದಿನಾಚರಣೆ ನಿಮಿತ್ತ, ಗ್ರಂಥ ಬಿಡುಗಡೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು. ಹಿರಿಯ ವಿದ್ವಾಂಸ ಡಾಕ್ಟರ್ ಶಾಂತಿನಾಥ ದಿಬ್ಬದ, ಕನ್ನಡ ಸಂಶೋಧನ ಮಾರ್ಗ ಸಂಪುಟ-2 ಗ್ರಂಥ ಬಿಡುಗಡೆಗೊಳಿಸಿ, ಮಾತನಾಡಿ, ಪ್ರೊಫೆಸರ್ ಕಲಬುರ್ಗಿ ಅವರು, "ಆಧಾರಗಳಿಲ್ಲದೆ ಇತಿಹಾಸವಿಲ್ಲ; ಆಧಾರಗಳಿಲ್ಲದೆ ಸಂಶೋಧನೆಯಿಲ್ಲ" ಎಂಬ ತತ್ವವನ್ನು ಪ್ರತಿಪಾದಿಸಿದರು. ಅವರ ಸಂಶೋಧನಾ ಪರಂಪರೆಯನ್ನು ಮುಂದುವರಿಸಬೇಕಿದೆ ಎಂದರು. ಶ್ರೀಮತಿ ಉಮಾದೇವಿ ಕಲಬುರ್ಗಿ ಭಾಗವಹಿಸಿದ್ದರು.

<><><>

41ನೇ ರಾಷ್ಟ್ರೀಯ ನೇತ್ರದಾನ ಪಾಕ್ಷಿಕ, ಕಳೆದ 25ನೇ ತಾರೀಖಿನಿಂದ, ಸೆಪ್ಟೆಂಬರ್ 8ರ ವರೆಗೆ, ಆಚರಿಸಲಾಗುತ್ತಿದೆ. 14 ದಿನಗಳ ರಾಷ್ಟ್ರವ್ಯಾಪಿ ನೇತ್ರದಾನ ಜಾಗೃತಿ ಅಭಿಯಾನದಡಿ, ಜನ ಜಾಗೃತಿ ಕಾರ್ಯಕ್ರಮ, ಮರಣಾನಂತರ ತಮ್ಮ ಕಣ್ಣುಗಳನ್ನು ದಾನ ಮಾಡುವ ಪ್ರತಿಜ್ಞೆ ಕೈಗೊಳ್ಳಲು, ಜನರನ್ನು ಪ್ರೇರೇಪಿಸುವ ಉದ್ದೇಶ ಹೊಂದಲಾಗಿದೆ. 1985 ರಿಂದ ರಾಷ್ಟ್ರೀಯ ನೇತ್ರದಾನ ಪಾಕ್ಷಿಕವನ್ನು, ಕೇಂದ್ರ ಸರ್ಕಾರ ದೇಶಾದ್ಯಂತ ಆಯೋಜಿಸುತ್ತಿದೆ.

<><><>

ಮಗುವಿನ ಕಲಿಕೆ ಮತ್ತು ಬೆಳವಣಿಗೆಯಲ್ಲಿ, ಆರೋಗ್ಯಕರ ದೃಷ್ಟಿಯ ನಿರ್ಣಾಯಕ ಪಾತ್ರದ ಕುರಿತು, ಪಾಲಕರು, ಪೋಷಕರಲ್ಲಿ ಜಾಗೃತಿ ಮೂಡಿಸಲು, ಪ್ರತಿ ವ ್ಃ ಆಗಸ್ಟ್ ತಿಂಗಳಲ್ಲಿ 'ಮಕ್ಕಳ ಕಣ್ಣಿನ ಆರೋಗ್ಯ ಮತ್ತು ಸುರಕ್ಷತಾ ಮಾಸ'ವನ್ನು ಆಚರಿಸಲಾಗುತ್ತದೆ. ಇಂದಿಗೆ ಈ ಅಭಿಯಾನ ಮುಕ್ತಾಯವಾಗಲಿದೆ.

<><><>

ವಿಜಯಪುರ ಜಿಲ್ಲೆ, ಇಂಡಿ ತಾಲೂಕು, ಸಾವಳಸಂಗ ಗ್ರಾಮದಲ್ಲಿ, ಜ್ಞಾನಯೋಗಿ ಶ್ರೀ ಸಿದ್ದೇಶ್ವರ ಸ್ವಾಮೀಜಿ ವೃಕ್ಷೋದ್ಯಾನವನ್ನು, ಅರಣ್ಯ ಖಾತೆ ಸಚಿವ ರಾಮಲಿಂಗಾರೆಡ್ಡಿ ಉದ್ಘಾಟಿಸಿದ್ದಾರೆ. 2 ಕೋಟಿ 50 ಲಕ್ಷ ರೂಪಾಯಿ ವೆಚ್ಚದಲ್ಲಿ, ವೃಕ್ಷೋದ್ಯಾನವನ್ನು ಅಭಿವೃದ್ಧಿಪಡಿಸಲಾಗಿದ್ದು, ಇಂಡಿ ನಗರದಲ್ಲಿ ಟ್ರೀ ಪಾರ್ಕ್ ಹಾಗೂ ಕೃ ್ಣಮೃಗ ಮೀಸಲು ಅರಣ್ಯ ಅಭಿವೃದ್ಧಿಪಡಿಸಲಾಗುವುದು ಎಂದರು. ರೇವಣ ಸಿದ್ದೇಶ್ವರ ಏತ ನೀರಾವರಿ ಯೋಜನೆಯಿಂದ, ಈ ಭಾಗದ ಕೃಷಿಗೆ ಅನುಕೂಲವಾಗಲಿದೆ ಎಂದು, ಸಚಿವರು ಹೇಳಿದರು.

<><><>

ನೇಪಾಳದಲ್ಲಿ ಸಂಭವಿಸಿದ, ಪ್ರವಾಹ ಹಾಗೂ ಭೂಕುಸಿತದ ಹಿನ್ನೆಲೆ, ಅಲ್ಲಿ ಸಿಲುಕಿರುವ ಕನ್ನಡಿಗರ ರಕ್ಷಣಾ ಕಾರ್ಯಾಚರಣೆಯ ಕುರಿತು, ಹೊಸ ದಿಲ್ಲಿಯ ಕರ್ನಾಟಕ ಭವನದ, ನಿವಾಸಿ ಆಯುಕ್ತರಿಂದ, ಮುಖ್ಯಮಂತ್ರಿಗ ಡಿ.ಕೆ. ಶಿವಕುಮಾರ, ಮಾಹಿತಿ ಪಡೆದರು. ಈಗಾಗಲೇ 54 ಜನ ಸುರಕ್ಷಿತವಾಗಿ ಮರಳಿದ್ದು, ಸಂತ್ರಸ್ತರ ಕುಟುಂಬಗಳು, ಆತಂಕ ಪಡಬೇಕಿಲ್ಲ. ಸರ್ಕಾರ ಜೊತೆಗಿದೆ ಎಂದು ಮುಖ್ಯಮಂತ್ರಿ ಭರವಸೆ ನೀಡಿದರು.

<><><>

ಹಾಕಿ ಮಾಂತ್ರಿಕ, ಮೇಜರ್ ಧ್ಯಾನಚಂದ ಅವರ, ಜನ್ಮದಿನದ ಸ್ಮರಣಾರ್ಥ, ರಾಷ್ಟ್ರೀಯ ಕ್ರೀಡಾ ದಿನಾಚರಣೆ ಹಿನ್ನೆಲೆ, ಧಾರವಾಡದ ಆರ್.ಎನ್.ಶೆಟ್ಟಿ ಕ್ರೀಡಾಂಗಣದಲ್ಲಿ, ನೂತನವಾಗಿ ನಿರ್ಮಿಸಿದ, ಸಿಂಥೆಟಿಕ್ ಬಾಸ್ಕೆಟ್ ಬಾಲ್ ಮೈದಾನವನ್ನು, ವಿಧಾನಸಭೆ ವಿಪಕ್ಷ ಉಪ ನಾಯಕ, ಅರವಿಂದ ಬೆಲ್ಲದ ಉದ್ಘಾಟಿಸಿದರು. ರಾಷ್ಟ್ರೀಯ ಕ್ರೀಡಾಕೂಟಗಳಲ್ಲಿ ಭಾಗವಹಿಸಿದ, 10 ಸಾಧಕ ಕ್ರೀಡಾಪಟುಗಳನ್ನು ಸನ್ಮಾನಿಸಿದರು. ಖೇಲೋ ಇಂಡಿಯಾ, ಅಥ್ಲೆಟಿಕ್ಸ್ ಕ್ರೀಡಾಪಟುಗಳಿಗೆ, ಸಮವಸ್ತ್ರ ವಿತರಿಸಿದರು. ಇತ್ತೀಚೆಗೆ ನಿವೃತ್ತರಾದ ಹಿರಿಯ ಬಾಸ್ಕೆಟ್ ಬಾಲ್ ತರಬೇತುದಾರ, ಪಿ.ಕೆ.ಹಾಸನ ಅವರಿಗೆ, ಗಣ್ಯರು ಅಭಿನಂದಿಸಿದರು.

<><><>

ರಾಷ್ಟ್ರ ಮಟ್ಟದ, ಕೊಕ್ಕೊ ಚಾಂಪಿಯನ್‌ಶಿಪ್ ನಲ್ಲಿ ಭಾಗವಹಿಸಲಿರುವ, ಕರ್ನಾಟಕದ 18 ವರ್ಷದೊಳಗಿನವರ, ಬಾಲಕರ ಕೊಕ್ಕೊ ತಂಡದ ತರಬೇತುದಾರರಾಗಿ, ಧಾರವಾಡ ಜಿಲ್ಲೆ, ಅಣ್ಣಿಗೇರಿಯ, ಎಂ.ಬಿ. ಹಳ್ಳಿ ಸರ್ಕಾರಿ ಪ್ರಥಮ ದರ್ಜೆ ಮಹಾವಿದ್ಯಾಲಯದ, ಅತಿಥಿ ದೈಹಿಕ ಶಿಕ್ಷಣ ನಿರ್ದೇಶಕ, ಪ್ರಕಾಶ ಪೂಜಾರ ನೇಮಕಗೊಂಡಿದ್ದಾರೆ.

<><><>

ಸಂಕ್ಷಿಪ್ತ ಸುದ್ದಿಗಳು:

<><><>

ಮಂತ್ರಾಲಯ, ನಂಜನಗೂಡು ಸೇರಿದಂತೆ, ನಾಡಿನ ಶ್ರೀ ರಾಘವೇಂದ್ರ ಮಠಗಳಲ್ಲಿ ಗುರು ರಾಯರ 355ನೇ ಮಧ್ಯಾರಾಧನೆ ಮಹೋತ್ಸವ, ಶ್ರದ್ಧಾ–ಭಕ್ತಿಯಿಂದ ಜರುಗಿತು.

<><><>

'ಸ್ವಾವಲಂಬನೆ, ಉದ್ಯಮಶೀಲತೆ ಮತ್ತು ದೇಶಿ ಉತ್ಪಾದನೆ ಉತ್ತೇಜಿಸುವುದು' ಎಂಬ ಧ್ಯೇಯದೊಂದಿಗೆ, ಭಾರತದ ಆರ್ಥಿಕತೆಯ ಬೆನ್ನೆಲುಬಾಗಿರುವ, ಅತೀ ಸಣ್ಣ, ಸಣ್ಣ, ಸೂಕ್ಷ್ಮ ಹಾಗೂ ಮಧ್ಯಮ ಕೈಗಾರಿಕೆಗಳ ದಿನಾಚರಣೆ ಹಲವೆಡೆ ನಡೆಯಿತು.

<><><>

ಕೊಪ್ಪಳ ಜಿಲ್ಲೆ, ನೂತನ ಪೊಲೀಸ್ ವರಿ ಷ್ಠಾಧಿಕಾರಿಯಾಗಿ, ಸಾಹಿಲ್ ಬಾಗ್ಲಾ ಅಧಿಕಾರ ವಹಿಸಿಕೊಂಡಿದ್ದಾರೆ.

<><><>

ಗದಗ ಜಿಲ್ಲೆ, ನೂತನ ಪೊಲೀಸ್ ವರಿ ಷ್ಠಾಧಿಕಾರಿಯಾಗಿ, ಎಚ್.ಎನ್.ಮಿಥುನ್ ಅಧಿಕಾರ ಸ್ವೀಕರಿಸಿದ್ದಾರೆ.

<><><>

ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:

<><><>

- ಮನ್ ಕಿ ಬಾತ್; 'ವಿಕಸಿತ ಭಾರತಕ್ಕಾಗಿ, ವ್ಯಸನಮುಕ್ತ ಯುವಜನತೆ'; ಪ್ರಧಾನಮಂತ್ರಿ ಪ್ರತಿಪಾದನೆ.
- ಅರಣ್ಯ ಇಲಾಖೆಯಿಂದ, ಚಾರಣ ಮತ್ತು ಇಕೋ–ಟ್ರೇಲ್, ಮಾದರಿ ಕಾರ್ಯಾಚರಣೆ ವಿಧಾನ ಜಾರಿಗೆ.
- ಎಂ.ಎಂ.ಕಲಬುರ್ಗಿ ಅವರ ಜ್ಞಾನದ ಕಾಯಕ, ಪೀಳಿಗೆಗಳಿಗೆ ದಾರಿದೀಪ – ಕೊಡಗು ವಿಶ್ವವಿದ್ಯಾಲಯದ ಉಪ ಕುಲಪತಿ, ಅಭಿಮತ.

- 'ಮಕ್ಕಳ ಕಣ್ಣಿನ ಆರೋಗ್ಯ ಮತ್ತು ಸುರಕ್ಷತಾ ಮಾಸ'; ಪೋಷಕರ ಜಾಗೃತಿ ಅಭಿಯಾನ, ಇಂದಿಗೆ ಮುಕ್ತಾಯ.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

<><><>

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಈ ಬೆಳಗ್ಗೆ 7 ಗಂಟೆ 35 ನಿಮಿಷಕ್ಕೆ.

<><><>